ಜೂನ್ 12ರ 2023. ಓರ್ವ ವಿದ್ಯಾವಂತ ಮಹಿಳೆ, ಒಂದು ಮಗುವಿನ ತಾಯಿ. ಪೊಲೀಸ್ ಠಾಣೆಗೆ ತನ್ನ ತಾಯಿಯ ಮೃತ ದೇಹದೊಡನೆ ಬಂದು, ತನ್ನ ತಾಯಿಯನ್ನು ತಾನು ಕೊಂದಿರುವೆನೆಂದು ತಿಳಿಸಿ, 'ಈ ಕೃತ್ಯದಲ್ಲಿ ನನ್ನ ಕುಟುಂಬದ ಬೇರೆ ಯಾರೂ ಜೊತೆಯಾಗಿಲ್ಲ, ಅವರಾರಿಗೂ ತೊಂದರೆ ಕೊಡಬೇಡಿ' ಎಂದು ಒತ್ತಿ ಹೇಳಿದಳು. ತಾಯಿಯ ಸಾವಿಗೆ ಸಂಪೂರ್ಣ ಜವಾಬ್ದಾರಿ ಹೊತ್ತು ಆಕೆ ಪೊಲೀಸರಿಗೆ ಶರಣಾದಳು. ಪತ್ರಿಕೆಗಳಲ್ಲಿ ಪ್ರಕಟವಾದ ಆಕೆಯ ಫೋಟೊ ನೋಡಿದೆ: ಆ ಕಣ್ಣುಗಳಲ್ಲಿ ಭೀತಿ ಇರಲಿಲ್ಲ, ಕ್ರೌರ್ಯವಿರಲಿಲ್ಲ, ಕಂಬನಿಯೂ ಇರಲಿಲ್ಲ – 'ಇದೊಂದೇ ನನ್ನ ಸಮಸ್ಯೆಗೆ ಇದ್ದ ಪರಿಹಾರ, ಇದೊಂದೇ ನನಗಿದ್ದ ದಾರಿ' ಎಂಬಂತಹ ಹತಾಶ ನಿಸ್ಸಹಾಯಕ ನಿರ್ಲಿಪ್ತತೆ, 'ಇದೋ ನನ್ನ ಬದುಕನ್ನು ಒಪ್ಪಿಸುತ್ತಿದ್ದೇನೆ' ಎಂಬ ಸಂಪೂರ್ಣ ಶರಣಾಗತಿಯ ಭಾವ.

ಸುದ್ದಿಪತ್ರಿಕೆಗಳಲ್ಲಿನ ವರದಿಯ ವಿವರ ಹೀಗಿದೆ:

39 ವರ್ಷ ವಯಸ್ಸಿನ ಪರರಾಜ್ಯದಿಂದ ಬಂದ ಈಕೆ ವಿದ್ಯಾವಂತೆ, ಫಿಸಿಯೊಥೆರಪಿಸ್ಟ್ ಆಗಿ ಕೆಲಸ, ಬೆಂಗಳೂರಿನಲ್ಲಿ ವಾಸ. ಈಕೆಯ ಪತಿ ಎಲೆಕ್ಟ್ರಿಕಲ್ ಎಂಜಿನಿಯರ್. ಕೋಡಿಚಿಕ್ಕನಹಳ್ಳಿಯ ಒಂದು ಒಳ್ಳೆಯ ಅಪಾರ್ಟ್‌ಮೆಂಟ್‌ನಲ್ಲಿ ವಾಸ. ಒಂದು ಕೋಣೆಯಲ್ಲಿ ಗಂಡ ಹೆಂಡತಿ, ಒಂದು ಕೋಣೆಯಲ್ಲಿ 70 ವರ್ಷ ವಯಸ್ಸಿನ ಅತ್ತೆ, ಮತ್ತೊಂದು ಕೋಣೆಯಲ್ಲಿ 71 ವರ್ಷ ವಯಸ್ಸಿನ ತಾಯಿ ವಾಸಿಸುತ್ತಿದ್ದರು. ಏಕೈಕ ಪುತ್ರಿಯಾಗಿದ್ದ ಈಕೆಯ ತಾಯಿ–ತಂದೆ ಕೋಲ್ಕತ್ತದಲ್ಲಿ ವಾಸವಾಗಿದ್ದರು. ಐದು ವರ್ಷಗಳ ಹಿಂದೆ ತಂದೆ ತೀರಿಹೋದಾಗ, ಮಗಳು ವಯಸ್ಸಾದ ತಾಯಿಯನ್ನು ಒಬ್ಬಳೇ ಇರಲು ಬಿಡಲಾರದೆ ಬೆಂಗಳೂರಿನ ತನ್ನ ಮನೆಗೆ ಕರೆತಂದಳು. ಆದರೆ ಆಕೆಯ ಅತ್ತೆ ಮತ್ತು ತಾಯಿಯ ನಡುವೆ ದಿನವೂ ಒಂದಿಲ್ಲೊಂದು ಸಣ್ಣಪುಟ್ಟ ವಿಷಯಕ್ಕೆ ಜಗಳವಾಗತೊಡಗಿತು. ಈ ಇಬ್ಬರು ಹಿರಿಯ ವಯಸ್ಸಿನ ಮಹಿಳೆಯರ ಕಿತ್ತಾಟ ಮನೆಯನ್ನು ಅಶಾಂತಿಯಿಂದ ತುಂಬಿತ್ತು. ಅದಾಗಲೇ ಈಕೆಯ ಒಂಬತ್ತು ವರ್ಷ ವಯಸ್ಸಿನ ಮಗ 'ಆಟಿಸ್ಟಿಕ್' ಇದ್ದು, ಹೈಪರಾಕ್ಟಿವ್ ಆಗಿದ್ದು, ಅವನಿಗೆ ಚಿಕಿತ್ಸೆ ನಡೆಯುತ್ತಿತ್ತು. ಮಗುವಿನ ಚಿಂತೆಯೇ ಸಾಕಷ್ಟು ಇದ್ದ ಈ ಮಹಿಳೆಗೆ, ದಿನವೂ ಸಣ್ಣಪುಟ್ಟದ್ದಕ್ಕೆಲ್ಲ ಕಿತ್ತಾಡುವ ಅತ್ತೆ ಮತ್ತು ತಾಯಿಯ ನಡುವಿನ ಜಗಳ ಮನಸ್ಸನ್ನು ಪ್ರಕ್ಷುಬ್ಧತೆಗೆ ತಳ್ಳುತ್ತಿತ್ತು.

ಅದೇ ಭಾನುವಾರ ಅತ್ತೆ ಮತ್ತು ತಾಯಿ ಅತಿ ಸಣ್ಣ ವಿಷಯಕ್ಕೆ ಮತ್ತೆ ಜಗಳವಾಡಿದರು. ತಾಯಿ, ಮಗಳಿಗೆ 'ನಾನು ಸಾಯುವುದಷ್ಟೆ ಇದಕ್ಕೆ ಪರಿಹಾರ' ಎಂದಳು. ಮಗಳು ಇಡೀ ರಾತ್ರಿ ಯೋಚಿಸಿ, 'ಇದೊಂದೇ ಪರಿಹಾರ' ಎಂದು ಆಕೆಯೂ ನಿರ್ಧರಿಸಿಬಿಟ್ಟಳು!

ಅಂದು ಸೋಮವಾರ ಬೆಳಗ್ಗೆ, ಗಂಡ 7.15ಕ್ಕೆ ಕೆಲಸಕ್ಕೆ ಹೋದರು. ಅತ್ತೆ ಒಂದು ಕೋಣೆಯಲ್ಲಿದ್ದರು. ಮಗ ಇನ್ನೊಂದು ಕೋಣೆಯಲ್ಲಿ. ತಾಯಿ ಮತ್ತೊಂದು ಕೋಣೆಯಲ್ಲಿದ್ದರು. ಈಕೆ ತಾಯಿಗೆ 30 ಮಾತ್ರೆಗಳನ್ನು ಕೊಟ್ಟು, ಕೋಣೆಗೆ ಚಿಲಕ ಹಾಕಿ ಹೊರಬಂದಳು. ನಂತರ ತಾಯಿಯ ಕೋಣೆಗೆ ಹೋಗಿ ನೋಡಿದಾಗ, ತಾಯಿ ಒದ್ದಾಡುತ್ತಿದ್ದರು. ತಾಯಿ ಮತ್ತಷ್ಟು ನೋಯುವುದು ಬೇಡವೆಂದು ಮಗಳು, ಆಕೆಗೆ ಜೀವದಿಂದ ಮುಕ್ತಿ ನೀಡಿದಳು. ತಾಯಿಯ ದೇಹದೊಡನೆ, ಆಟೊ ಹಿಡಿದು ಸೀದಾ ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದಳು. ಮೈಕೋ ಲೇಔಟ್‌ನ ಪೊಲೀಸ್ ಠಾಣೆಯಲ್ಲಿ ಕೊಲೆಯ ಕೇಸು ದಾಖಲಾಗಿದೆ. ಸಾವಿನ ರೌರವ ವಿವರಗಳನ್ನು ನಾನು ಉದ್ದೇಶಪೂರ್ವಕವಾಗಿ ನೀಡುತ್ತಿಲ್ಲ. ಕಾರಣ ನಕಾರಾತ್ಮಕ ವಿಷಯಗಳು, ವಿವರಗಳು, ಗ್ರಾಫಿಕ್ ಆಗಿ ತಿಳಿಸಿದಷ್ಟೂ, ತೋರಿಸಿದಷ್ಟೂ ಅವು ನಮ್ಮ ಮನಸ್ಸಿನ ಮೇಲೆ ಅಚ್ಚೊತ್ತಿ ನಿಲ್ಲುತ್ತವೆ, ನಕಾರಾತ್ಮಕ ಚಿಂತನೆಗೆ ಕಾರಣವಾಗುತ್ತವೆ.

'ಮಾತೃಹತ್ಯೆ' ನಮ್ಮ ಸಮಾಜದಲ್ಲಿ ಹೊಸ ವಿಷಯವಲ್ಲ. ಒಂದೂವರೆ ವರ್ಷದ ಹಿಂದೆ, ಬೆಂಗಳೂರಿನ ಸ್ಥಿತಿವಂತ ಮನೆಯ ಹುಡುಗಿ, ತನ್ನ ಮಲತಂದೆಯೊಡನೆ ಸೇರಿ, ಹಣ ಮತ್ತು ಆಸ್ತಿಯನ್ನು ಕಬಳಿಸಲು ತನ್ನ ತಾಯಿ ಅರ್ಚನಾ ರೆಡ್ಡಿಯನ್ನು ಕೊಂದ ಭೀಕರ ಸುದ್ದಿ ನಮ್ಮನ್ನು ನಡುಗಿಸಿತ್ತು. ಲೋಭಕ್ಕಾಗಿ ಮಾಡಿದ ಕೊಲೆಗಳನ್ನು ಇಲ್ಲಿ ನಾನು ಚರ್ಚಿಸುತ್ತಿಲ್ಲ. ಅವು ಕ್ರೌರ್ಯ ಮತ್ತು ವಿಶ್ವಾಸಘಾತಕ ನಡತೆಯ ಪರಮ ಉದಾಹರಣೆಗಳು. ಆದರೆ, ತಾಯಿಯ ಸಾವಿಗೆ ಕಾರಣಳಾದ ಈ ಮಹಿಳೆಯ ಪ್ರಕರಣ ನಮ್ಮ ಸಮಾಜದಲ್ಲಿ ವಿಪರೀತವಾಗಿರುವ ಮಾನಸಿಕ ಒತ್ತಡವನ್ನು, ಅದನ್ನು ನಿಭಾಯಿಸುವ ನೈಪುಣ್ಯ ನಶಿಸಿರುವುದನ್ನೂ ಎತ್ತಿ ತೋರಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ವಿದ್ಯಾವಂತರಿದ್ದರೂ, ಬುದ್ಧಿವಂತರಿದ್ದರೂ ಬದುಕಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಕೌಶಲವನ್ನೇ ಕಳೆದುಕೊಂಡಿದ್ದಾರೆ ಎಂದು ಅರಿವಾಗುತ್ತದೆ.

ನಗರ ಜೀವನದಲ್ಲಿ 'ಗುಂಪಿನಲ್ಲಿಯೂ ಕಾಡುವ ಒಂಟಿತನ'ವಿದೆ. ಹೊರ ರಾಜ್ಯಗಳಿಂದ ಬಂದಾಗ, ಬೇರೊಂದು ಭಾಷೆ, ಸಂಸ್ಕೃತಿಯಲ್ಲಿ ನೆಲೆಸಿದಾಗ ಕಾಡುವ ಪರಕೀಯತೆ ಇದೆ. ಬಹುಜನರಿಗೆ 'ಸೋಷಿಯಲ್ ಮೀಡಿಯಾ' ಅಷ್ಟೇ ಸಂಪರ್ಕದ ಸಾಧನವಾಗಿ, ಆ ಮಿಥ್ಯಾಲೋಕದಲ್ಲಿ ಸಕಲರೂ ಸಂತಸದಿಂದ ಯಾವ ಸಮಸ್ಯೆ ಇಲ್ಲದೆ ಸುಖ ಪಡುವುದನ್ನು ನೋಡುವಾಗ, ತಮ್ಮಂತರಂಗದ



ಬದುಕು ಹಗುರ ಅನಿಸಾಕ ಬೇರೇನ ಬೇಕ... ಕಂದಮ್ಮನ ನಗಿ ಸಾಕಾ...